# ದಲಿತ ಕಥಾ ಸಾಹಿತ್ಯ ಕ್ಷೇತ್ರಕ್ಕೆ ಡಾ. ಎಚ್. ಟಿ. ಪೋತೆ ಅವರ ಕೊಡುಗೆ

**ಸವಿತಾಬಾಯಿ ಚಂದಪ್ಪ ಗೌರೆ***

**DOI: https://doi.org/10.5281/zenodo.21794504**

**ABSTRACT**

ಕನ್ನಡ ದಲಿತ ಕಥಾ ಸಾಹಿತ್ಯ ಕ್ಷೇತ್ರಕ್ಕೆ ಡಾ. ಎಚ್. ಟಿ. ಪೋತೆ ಅವರ ಕೊಡುಗೆ ಅಪಾರವಾಗಿದೆ. ಶೋಷಣೆ, ಅಸ್ಪೃಶ್ಯತೆ, ಬಡತನ ಹಾಗೂ ಜಾತೀಯತೆಯಂತಹ ಸುಡುವ ವಾಸ್ತವಗಳನ್ನು ತಮ್ಮ ಕಥೆಗಳ ಮೂಲಕ ಅವರು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. 'ಚಮ್ಮಾವುಗೆ', 'ಬೆತ್ತಲಾದ ಚಂದ್ರ', ಮತ್ತು 'ಕರುಳರಿಯುವ ಹೊತ್ತು' ಮುಂತಾದ ಕೃತಿಗಳಲ್ಲಿ ಅವರ ಸ್ವಂತ ಜೀವನಾನುಭವಗಳು ತಳಸಮುದಾಯದ ನೋವು–ನಲಿವುಗಳಾಗಿ ಅನಾವರಣಗೊಂಡಿವೆ. ಮೇಲ್ವರ್ಗದ ದೌರ್ಜನ್ಯದ ವಿರುದ್ಧ ಸಿಡಿದೆದ್ದೇಳಲು ಹಾಗೂ ಶಿಕ್ಷಣದ ಮೂಲಕ ಜಾಗೃತರಾಗಿ ಜಾತಿ ವ್ಯವಸ್ಥೆಯಿಂದ ಬಿಡುಗಡೆ ಹೊಂದಲು ಈ ಕಥೆಗಳು ಪ್ರೇರೇಪಿಸುತ್ತವೆ. ತಂದೆ–ತಾಯಿಯರ ತ್ಯಾಗ, ಜೀತಪದ್ಧತಿಯ ಕ್ರೌರ್ಯ ಮತ್ತು ಬಾಡಿಗೆ ಮನೆ ಹುಡುಕುವಾಗಿನ ಜಾತಿ ನಿಂದನೆಯಂತಹ ಸಾಮಾಜಿಕ ಸತ್ಯಾಂಶಗಳನ್ನು ಅವರ ಬರಹಗಳು ಸೂಕ್ಷ್ಮವಾಗಿ ವಿಶ್ಲೇಷಿಸುತ್ತವೆ. ದಲಿತರ ಬದುಕು ಪರಿವರ್ತನೆಯಾಗಬೇಕು ಮತ್ತು ಶೈಕ್ಷಣಿಕ ಜಾಗೃತಿ ಮೂಡಬೇಕು ಎಂಬ ಆಶಯವನ್ನು ಅವರ ಸಾಹಿತ್ಯವು ಬಲವಾಗಿ ಪ್ರತಿಪಾದಿಸುತ್ತದೆ.

**KEYWORDS:** ದಲಿತ ಕಥಾ ಸಾಹಿತ್ಯ, ಡಾ. ಎಚ್. ಟಿ. ಪೋತೆ, ಸಾಮಾಜಿಕ ಶೋಷಣೆ, ಅಸ್ಪೃಶ್ಯತೆ, ಚಮ್ಮಾವುಗೆ.

* **ಸವಿತಾಬಾಯಿ ಚಂದಪ್ಪ ಗೌರೆ,** ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ದಲಿತ ಸಾಹಿತ್ಯ ಈ ಸಮಾಜದ ಹೊಸ ದನಿ. ಅಸಮಾನ ಬದುಕನ್ನು ಅನುಭವಿಸುತ್ತಿದ್ದ ಅಸ್ಪೃಶ್ಯರಲ್ಲಿ ಉಂಟಾದ ಅಕ್ಷರ ಕ್ರಾಂತಿಯೇ ದಲಿತ ಸಾಹಿತ್ಯದ ಉಗಮಕ್ಕೆ ಕಾರಣವಾಯಿತು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ದಲಿತ ಚಳುವಳಿ ಮತ್ತು ದಲಿತ ಸಾಹಿತ್ಯ ನೀಡಿದ ಕೊಡುಗೆ ಅಪಾರವಾದದ್ದು. 1970ರ ದಶಕದಲ್ಲಿ ಉಂಟಾದ ಸಾಮಾಜಿಕ ಹಾಗೂ ರಾಜಕೀಯ ಒತ್ತಡಗಳು, ದಲಿತ ಪ್ಯಾಂಥರ್ಸ್, ಕಪ್ಪು ಸಾಹಿತ್ಯ, ದಿಗಂಬರ ಸಾಹಿತ್ಯ ಅಷ್ಟೇ ಅಲ್ಲದೆ ಮಹಾನ್ ಸಮಾಜ ಸುಧಾರಕರಾದ ಬುದ್ಧ, ಬಸವ, ಫುಲೆ, ಅಂಬೇಡ್ಕರ್, ಪೆರಿಯಾರ್, ನಾರಾಯಣ ಗುರು, ಲೋಹಿಯಾ ಮುಂತಾದ ಚಿಂತಕರ ವಿಚಾರಗಳ ಪ್ರೇರಣೆ ಪ್ರಭಾವಗಳಿಗೆ ಒಳಗಾದ ಅನೇಕ ದಲಿತ ಲೇಖಕರು ಬರಹಕ್ಕಿಳಿದರು.

ಕನ್ನಡದ ದಲಿತ ಕಥೆಗಳು ಮೊಟ್ಟ ಮೊದಲು ಬೆಳೆದು ಬಂದದ್ದು, ಜಿ. ವೆಂಕಟಯ್ಯನವರ 'ಮಗಳ ಮಾಂಗಲ್ಯ', ಸಿ. ಎಂ. ದೇವೇಂದ್ರ ನಾಯಕರ ಜೀವನ ಪರಂಪರೆ ಕಥೆಗಳು, ಕುಮಾರ ಕಕ್ಕಯ್ಯ ಪೋಳ ಅವರ ಸಮಾಜದ ತೊಡರಿಗೆ ಧರ್ಮದ ಕಗ್ಗಂಟು ಕಥೆಗಳು ಪ್ರಕಟವಾಗಿದ್ದರೂ, ದಲಿತ ಕಥೆಗಳಿಗೆ ಮತ್ತು ದಲಿತ ಸಾಹಿತ್ಯಕ್ಕೆ ಒಂದು ಮಾರ್ಗವನ್ನು ಹಾಕಿಕೊಟ್ಟವರು ದೇವನೂರ ಮಹಾದೇವರು. ಇವರ ನಂತರ ದಲಿತ-ಬಂಡಾಯದ ಲೇಖಕರಾದ ಕಾಳೇಗೌಡ ನಾಗವಾರ, ಬೆಸಗರಹಳ್ಳಿ ರಾಮಣ್ಣ, ಕುಂ. ವೀರಭದ್ರಪ್ಪ, ಅರವಿಂದ ಮಾಲಗತ್ತಿ, ಕಟ್ಪಾಡಿ, ಲಲಿತಾ ನಾಯಕ, ಹತಗುಂದಿ ಶ್ರೀಕಾಂತ ಮುಂತಾದವರು ಹೊಸ ಸಂವೇದನೆಯ ಕಥೆಗಳನ್ನು ರಚಿಸಿ ದಲಿತ ಕಥಾ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅನಂತರದಲ್ಲಿ ಮೊಗ್ಗಳ್ಳಿ ಗಣೇಶ, ಬಿ. ಶ್ರೀನಿವಾಸ, ಮೋಹನ ನಾಗಮ್ಮ, ಮೊದಲಾದವರು ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಗೈದರು. ಇವರಲ್ಲಿ ಪ್ರಮುಖರಾದ ಡಾ. ಎಚ್. ಟಿ. ಪೋತೆ ಅವರು ದಲಿತ ಕಥಾ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದದ್ದು.

ಮೂಲತಃ ಉತ್ತರ ಕರ್ನಾಟಕದ ಬಯಲು ನಾಡಿನ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಂಜಗಿ ಎಂಬ ಕುಗ್ರಾಮದಲ್ಲಿ ಜನಿಸಿದ ಹನುಮಂತ ತಿಪ್ಪಣ್ಣ ಪೋತೆ, 'ಡಾ. ಎಚ್. ಟಿ. ಪೋತೆ' ಅವರು ಅಸ್ಪೃಶ್ಯ ಸಮುದಾಯದ ಅವಿಭಕ್ತ ಕುಟುಂಬದಲ್ಲಿ ಜನಿಸಿ, ಅಕ್ಷರಸ್ಥರಾದದ್ದು ದೊಡ್ಡ ಪವಾಡವೆಂದರೆ ತಪ್ಪಾಗಲಾರದು. ಅಕ್ಷರ ವಂಚಿತವಾದ ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ, ಎತ್ತರದ ಶಿಖರವನ್ನು ತಲುಪಿದ ಶಿಖರಶಿರೋಮಣಿ, ದಿಟ್ಟತನದ ಧೀಮಂತ, ಕೆಚ್ಚೆದೆಯ ವಾಕ್ ಚಾತುರ್ಯವುಳ್ಳ ನಿಪುಣರು ಹಾಗೂ ತಮ್ಮ ಬರಹ ಮತ್ತು ಭಾಷಣಗಳ ಮೂಲಕ ಇಡೀ ಕನ್ನಡ ನಾಡಿಗೆ ಚಿರಪರಿಚಿತರಾಗಿರುವ ಡಾ. ಎಚ್. ಟಿ. ಪೋತೆಯವರು ಜಾನಪದ ವಿದ್ವಾಂಸರು, ವಿಮರ್ಶಕರು, ಲೇಖಕರು, ಅನುವಾದಕರು, ಸಮಾಜಪರ ಚಿಂತಕರು, ಸಂಶೋಧಕರು, ಸಂವೇದನಾಶೀಲ ಕಥೆಗಾರರು, ಹುಟ್ಟು ಹೋರಾಟಗಾರರಾಗಿದ್ದಾರೆ. ಇವರು ಬುದ್ಧ, ಬಸವ, ಅಂಬೇಡ್ಕರ್, ಫುಲೆ, ಪೆರಿಯಾರ್, ಬಿ.ಶ್ಯಾಮಸುಂದರ್ ಅಂತಹ ಮಹಾನ್ ಸಮಾಜ ಸುಧಾರಕರ ಚಿಂತನೆಗಳ ಪ್ರಭಾವಕ್ಕೊಳಗಾದವರು, ತಮ್ಮ ಹರಿತವಾದ ವೈಚಾರಿಕ ಚಿಂತನೆಗಳ ಮೂಲಕ ಬರವಣಿಗೆಗೆ ಇಳಿದು ಕನ್ನಡ

ಸಾಹಿತ್ಯ ಲೋಕದ ಗಮನ ಸೆಳೆದವರು.

ಡಾ. ಪೋತೆಯವರು ಚಮ್ಮಾವುಗೆ, ಬೆತ್ತಲಾದ ಚಂದ್ರ, ಕರುಳರಿಯುವ ಹೊತ್ತು ಕಥಾ ಸಂಕಲನಗಳನ್ನು ಪ್ರಕಟಿಸುವ ಮೂಲಕ ದಲಿತ ಕಥಾ ಕ್ಷೇತ್ರದಲ್ಲಿ ತಮ್ಮ ಗಟ್ಟಿತನವನ್ನು ಗುರುತಿಸಿಕೊಂಡಿದ್ದಾರೆ. ಅಲ್ಲದೆ ಸುಮಾರು ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಹೊರತರುವುದರ ಮೂಲಕ ಸಾಹಿತ್ಯ ಲೋಕಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದ ಇವರು ಚಮ್ಮಾವುಗೆ ಕಥಾಸಂಕಲನಕ್ಕೆ ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಡಾ. ಎಚ್. ಟಿ. ಪೋತೆಯವರ ಕಥೆಗಳು ಸಾಮಾಜಿಕ ಕಳಕಳಿಯನ್ನು ಹೊಂದಿದ್ದು, ಅಸ್ಪೃಶ್ಯತೆ, ಅನಕ್ಷರತೆ, ಜಾತೀಯತೆ, ಸ್ತ್ರೀ ಸಂವೇದನೆ, ಶೋಷಣೆ, ಗುಲಾಮಗಿರಿ, ಜೀತಪದ್ಧತಿ, ಮೇಲ್ವರ್ಗದವರ ದೌರ್ಜನ್ಯವನ್ನು ಗಾಢವಾಗಿ ಶೋಧಿಸುತ್ತವೆ.

ಇವರ ಚಮ್ಮಾವುಗೆ ಕಥಾ ಸಂಕಲನದಲ್ಲಿ ತಮ್ಮ ಬಾಲ್ಯದ ಕಹಿ ಘಟನೆಗಳು ಮತ್ತು ಜೀವನದಲ್ಲಿ ಪ್ರತ್ಯಕ್ಷವಾಗಿ ಅನುಭವಿಸಿದ ಘಟನೆಗಳು ವಸ್ತುವಾಗಿ ಮೂಡಿಬಂದಿವೆ.

ಚಮ್ಮಾವುಗೆ ಕಥಾ ಸಂಕಲನದಲ್ಲಿ ಡಾ. ಪೋತೆ ಅವರು ವಾಸ್ತವ ಮತ್ತು ಕಲ್ಪನೆಯ ಅಂತರವಿಲ್ಲದೆ ನೈಜ ಬದುಕಿನ ಚಿತ್ರಣವನ್ನು ವಾಸ್ತವವಾಗಿ ಅಭಿವ್ಯಕ್ತಪಡಿಸಿರುವುದು ವಿಶಿಷ್ಟವಾಗಿದೆ. ತಮ್ಮ ಜೀವನಾನುಭವಗಳನ್ನು ತಳಸಮುದಾಯದ ಸಾಮಾನ್ಯರ ಅನುಭವಗಳನ್ನಾಗಿ ಸಾಮಾಜಿಕ ವ್ಯವಸ್ಥೆಯನ್ನು ವಿಶ್ಲೇಷಿಸುತ್ತವೆ. ಪ್ರಾದೇಶಿಕ ವೈಶಿಷ್ಟ್ಯತೆ ಎದ್ದು ಕಾಣುವ ಇಲ್ಲಿನ ಕಥೆಗಳು ಒಂದು ಕಾಲದ ಶೋಷಿತರ ನಿಷ್ಠುರ ಬದುಕಿನ ಜೀವನಾನುಭವಗಳನ್ನು ಒಳಗೊಂಡಿವೆ.

ದಲಿತರ ಬದುಕು ಪರಿವರ್ತನೆಯಾಗಬೇಕು. ಅಸಮಾನತೆ, ಶೋಷಣೆ ತಡೆಯಬೇಕು, ಸವರ್ಣೀಯರ ಶೋಷಣೆಯನ್ನು ಎದುರಿಸಲು ದಲಿತರು ಸನ್ನದ್ಧರಾಗಬೇಕು ಎನ್ನುವ ಆಶಯವನ್ನು ಅವರ ಸರ್ವಕಥೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ದಲಿತರು ವಿದ್ಯಾವಂತರಾಗಿ, ಜಾತಿ ವ್ಯವಸ್ಥೆಯಿಂದ ಬಿಡುಗಡೆ ಪಡೆದು ನವ ಬದುಕಿಗೆ ನಾಂದಿ ಹಾಡಬೇಕು ಎನ್ನುವ ತುಡಿತ ಲೇಖಕರಿಗಿದೆ. ಹಾಗೆಯೇ ಒಳಜಾತಿಗಳ ಕಾರಣದಿಂದಾಗಿ ತಮ್ಮ ತಮ್ಮಲ್ಲಿನ ಹೋರಾಟ ನಿಲ್ಲಿಸಿ ಶಾಶ್ವತವಾದ ನೆಲೆಗೆ ದಲಿತರು ಬರಲು ಸಾಧ್ಯವಾಗುತ್ತಿಲ್ಲ ಎನ್ನುವ ಆತಂಕ ಲೇಖಕರಿಗೆ ಕಾಡುತ್ತಿರುವುದು ಅವರ ಕಥೆಗಳಲ್ಲಿ ಅನಾವರಣಗೊಂಡಿದೆ.

'ಅಪ್ಪ' ಕಥೆಯಲ್ಲಿ ಸಾಹುಕಾರ ಮತ್ತು ಅಪ್ಪನ ನಡುವೆ ನಡೆದ ಸಂಭಾಷಣೆಯಲ್ಲಿ 'ಸಾಲಿ ಸಾಲಿ ಅಂತ ಮಕ್ಕಳನ್ನ ಸಾಲಿಗಿ ಕಳಿಸ್ತಿ, ಹೊಲ, ಮನಿ ಒತ್ತಿ ಇಡ್ತಿ, ಸಾಲಗಾರರು ಬಂದಾಗ ತಲಿ ಬಗ್ಗಿಸಿಕೊಂಡು ಕೊಡ್ತಿ, ಅದರ ಬದಲು ಜೀತಾಗೀತ ಇಡಬೇಕಪ್ಪಾ'

ಎನ್ನುವ ಸಾಹುಕಾರನ ಮಾತಿಗೆ ಉತ್ತರವಾಗಿ, 'ಇಲ್ರಿ ಸಾವುಕಾರ್‌ರಿ, ಮಕ್ಕಳು ಓದಿ ಸುಖವಾಗಿದ್ದರ ಸಾಕ್ರಿ, ನನ್ನ ಕಷ್ಟ ನನ್ನ ಗುಡಾರಿ, ಅವರ ಸುಖ ಅವರ ಗುಡಾರಿ, ಇಲ್ಲ ಅಪ್ಪ' ಸವರ್ಣಿಯರಿಂದ ಶೋಷಣೆಗೆ ಒಳಗಾದರೂ ಮಕ್ಕಳನ್ನು ಅಕ್ಷರವಂತರನ್ನಾಗಿ ಮಾಡಲು ಪಟ್ಟ ಶ್ರಮ, ಅನುಭವಿಸಿದ ಅಪಮಾನ ಈ ಕಥೆ ಬಿಚ್ಚಿಡುತ್ತದೆ. ಇದು ನಿಜಕ್ಕೂ ದಲಿತರು ಎಚ್ಚೆತ್ತುಕೊಳ್ಳಬೇಕೆಂಬ ಸಂದೇಶ ಸಾರಿದೆ. ಅಲ್ಲದೇ ಒಬ್ಬ ತಂದೆಯ ಜವಾಬ್ದಾರಿ ಏನು? ಆತನ ಕಾಳಜಿ ಎಂತಹದು ಎನ್ನುವುದು ಕಥೆಯಲ್ಲಿ ಅನಾವರಣಗೊಂಡಿದೆ.

'ಅವ್ವ' ಕಥೆಯಲ್ಲಿ ತಾಯಿ ತನ್ನ ಮಕ್ಕಳಿಗಾಗಿ, ಕುಟುಂಬಕ್ಕಾಗಿ ತನ್ನ ಜೀವನವನ್ನು ತೇಯ್ದಿದ್ದಾಳೆ ಎನ್ನುವುದು ಅವ್ವನ ಪ್ರತಿಬಿಂಬದ ಮೂಲಕ ಇಂದಿನ ದಲಿತ ಸ್ತ್ರೀವಾದಕ್ಕೆ ಕನ್ನಡಿ ಹಿಡಿಯುತ್ತದೆ. ಅವ್ವ, ಮಗನ ಏಳಿಗೆಗಾಗಿ ತನ್ನ ಜೀವ ತೇಯ್ದರೂ ಕೂಡ ಮಗ ಹೆತ್ತ ತಾಯಿಯನ್ನು ಕಡೆಗಣಿಸುತ್ತಾನೆ. ಆದರೆ ಮಗನ ಒಳಿತನ್ನು ಬಯಸುವ ಅವ್ವ ತನ್ನ ಮನದಲ್ಲಿಯೇ ನೋವುಗಳನ್ನು ಮರೆಮಾಚುತ್ತಾಳೆ. ಹೆಣ್ಣಿನ ತ್ಯಾಗಮಯ ಜೀವನ, ಸಂವೇದನಾಶೀಲ ಬದುಕು ಈ ಕಥೆಯಿಂದ ಮನವರಿಕೆಯಾಗುತ್ತದೆ. ಹೆಣ್ಣು ಭೂಮಿ ತೂಕದವಳು ಎಂದು ಇದರಿಂದ ಅರಿಯಬಹುದು.

'ಬರ' ಕಥೆಯಲ್ಲಿ 'ಮೇಲ್ಜಾತಿಯವರು ನೆಲಕ್ಕೆ ಬಿದ್ದರೂ ಸಹ ಮೀಸೆ ಮಣ್ಣಾಗಲಿಲ್ಲ' ಎನ್ನುವಂತೆ ಏ! ಭೀಮ್ಯಾ ಕೂಲಿ ಕೊಡೋ ಮಗನ! ಎಂದು ಜೋರು ಮಾಡ್ತಿದ್ನಂತ ನಮ್ಮಪ್ಪ ಹಣ ಕೂಡಾಕಂತ ಹೋದ್ರ ರೊಕ್ಕ ಕೊಡಾಕಂತ ಬಂದು ನೆಪದಾಗ ನನಗೆ ಮುಟ್ಟತ್ತೇನ ಮಗನ ನೆಲದ ಮ್ಯಾಲ ಇಟ್ಟು ದೂರಸರದ್ ನಿಲ್ಲು' ಎನ್ನುವಲ್ಲಿ ಇಡೀ ಪ್ರದೇಶಕ್ಕೆ ಬರಗಾಲ ಸಂಭವಿಸಿದ ಸಂದರ್ಭದಲ್ಲಿ ಊರ ಗೌಡ ಜಾತಿಯ ದರ್ಪವನ್ನು ಬಿಡದೇ ಅಸ್ಪೃಶ್ಯರಿಗೆ ಹೇಗೆ ಅಪಮಾನಕ್ಕೊಳಪಡಿಸುತ್ತಾನೆ, ಆತನ ವೇದನೆ ಎಂತಹದು ಎಂಬುದು ಈ ಕಥೆ ಬಿಚ್ಚಿಡುತ್ತದೆ.

ಡಾ. ಪೋತೆರವರು 'ಕರುಳರಿಯದ ಹೊತ್ತು' ಕಥಾ ಸಂಕಲನದಲ್ಲಿ ಕೆಳಸಮಾಜದ ಅವಮಾನ, ವೇದನೆಗೆ ಶೋಷಣೆ, ದಬ್ಬಾಳಿಕೆಯನ್ನು ಬಿಚ್ಚಿಟ್ಟಿದ್ದಾರೆ. ಇಲ್ಲಿನ ಕೆಲವು ಕಥೆಗಳು ಜೀವನ ವೃತ್ತಾಂತವನ್ನು ಅನಾವರಣಗೊಳಿಸಿದರೆ, ಇನ್ನೂ ಕೆಲವು ಕಥೆಗಳು ಪ್ರಥಮ ಪುರುಷದ ಮೂಲಕ ಅಂದರೆ ಶೋಷಣೆ ಮಾಡುವ, ದುಡಿಸಿಕೊಳ್ಳುವ ಬಂಡವಾಳಶಾಹಿ ವ್ಯವಸ್ಥೆಯನ್ನು ಅನಾವರಣಗೊಳಿಸುತ್ತವೆ.

ದಲಿತರು ಎಲ್ಲಿಯವರೆಗೆ ಶಿಕ್ಷಣ ಪಡೆಯುವುದಿಲ್ಲವೋ ಅಲ್ಲಿಯವರೆಗೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ ಹಾಗೂ ಶೋಷಣೆಗೆ ಬಲಿಪಶುಗಳಾಗುತ್ತಾರೆ. ಕೇವಲ ಅಕ್ಷರಕ್ಕೆ ಮಾತ್ರ ಶೋಷಣೆಯನ್ನು ತಡೆಯುವ ಶಕ್ತಿ ಇದೆ ಎಂಬ ಸಂದೇಶ ಅವರ ಸರ್ವಕಥೆಗಳಲ್ಲಿ ಅಡಕವಾಗಿದೆ. ಶೋಷಿತರು ತಮ್ಮ ಶೋಷಣೆಯ ವಿರುದ್ಧ ಸಿಡಿದೆದ್ದೇಳಬೇಕು ಎನ್ನುವ ಆಶಯವನ್ನು ಅವರ ಕಥೆಗಳಲ್ಲಿ ಪ್ರತಿಪಾದಿಸಿದ್ದಾರೆ.

'ಸಂಭ್ರಮ' ಕಥೆಯಲ್ಲಿ ಆಳುವ ವರ್ಗ, ಕಾರ್ಮಿಕ ವರ್ಗವನ್ನು ಹೇಗೆ ಬಲಿಪಶುವಾಗಿ ಮಾಡುತ್ತದೆ ಎನ್ನುವುದನ್ನು ಬಂದೇಗೌಡ, ಆತನ ಹೆಂಡತಿ ಬಂಗಾರಿ ಹಾಗೂ ಜೀತದಾಳು ಬೂದನ ಮೂಲಕ ಲೇಖಕರು ಬಿಚ್ಚಿಟ್ಟಿದ್ದಾರೆ. ಜೀತದಾಳು ಬೂದ ತನ್ನ ಅಜ್ಜನ ಕಾಲದಿಂದ ಗೌಡನ ಮನೆಯ ಜೀತಗಾರನಾಗಿ, ಆ ಮನೆಯ ಸುಖ–ಸಂತೋಷದಲ್ಲಿಯೇ ಸಂಭ್ರಮಿಸುತ್ತಾನೆ. ಆದರೆ ತನ್ನದಲ್ಲದ ತಪ್ಪಿಗೆ ಬಲಿಯಾಗಿ ಹೆತ್ತ ತಾಯಿಯನ್ನು ಕಳೆದುಕೊಳ್ಳುತ್ತಾನೆ. ಕೊನೆಗೆ ಬಂದೇ ಗೌಡನ ಶಿಕ್ಷೆಗೆ ಗುರಿಯಾಗಿ ಪೊಲೀಸರ ಪಾಲಿನ ಹೆಣವಾಗುತ್ತಾನೆ.

'ಕರುಳರಿಯದ ಹೊತ್ತು' ಕಥೆಯಲ್ಲಿ ಶಿಕ್ಷಣದ ಮಹತ್ವ ಮತ್ತು ದಲಿತ ಸಂಘರ್ಷ ಸಮಿತಿಯ ಪ್ರಸ್ತಾಪವನ್ನು ವ್ಯಕ್ತಪಡಿಸಿದ್ದಾರೆ. ತಂದೆಯೊಂದಿಗೆ ಕಳೆದ ಬಾಲ್ಯದ ದಿನಗಳು, ಹಾಗೂ ತನ್ನ ಶಿಕ್ಷಣದ ಬಗ್ಗೆ ತಂದೆಗಿರುವ ಕಾಳಜಿಯಿಂದಾಗಿ ದೊಡ್ಡ ವ್ಯಕ್ತಿಯಾಗಿ ಬೆಳೆಯಲು ಸಾಧ್ಯವಾಯಿತು ಎಂದು ಬದುಕಿರದ ತಂದೆಯೊಂದಿಗೆ ಹಗಲುಗನಸಿನಲ್ಲಿ ತಮ್ಮ ಬಾಲ್ಯದ ಮನದಾಳದ ಮಾತುಗಳನ್ನು ಹಂಚಿಕೊಳ್ಳುತ್ತಾರೆ. ಮನುಷ್ಯನ ಜೀವನವೇ ಒಂದು ಹೋರಾಟವಾಗಿದೆ. ಹುಟ್ಟಿನಿಂದ ಯಾರೂ ಪರಿಪೂರ್ಣರಲ್ಲ. ಸುಳ್ಳಿಗೆ ಯಾವತ್ತೂ ತಲೆಬಾಗದೇ ಸತ್ಯಕ್ಕೆ ಹೆಗಲು ಕೊಡಬೇಕು. ಆಗ ಹೋರಾಟದ ರಥ ತಾನಾಗಿಯೇ ಸಾಗುತ್ತದೆ ಎನ್ನುವ ಸಂದೇಶ ವ್ಯಕ್ತಪಡಿಸಿದ್ದಾರೆ.

'ಮನೆ–ಮನದ ಮೈಲಿಗೆ' ಕಥೆಯಲ್ಲಿ ಲೇಖಕರು ತಮ್ಮ ಜೀವನದಲ್ಲಿ ಅನುಭವಿಸಿದ ಕ್ರೂರ ನಿಂದನೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಬಡತನದ ಬವಣೆಯಲ್ಲಿ ಬೆಳೆದು ಶಿಕ್ಷಣ ಪಡೆದುಕೊಂಡು ಡಾಕ್ಟರೇಟ್ ಪದವಿ ಪಡೆದ ನಂತರ ಉದ್ಯೋಗ ಅರಸಿ ಪಟ್ಟಣ ಸೇರಿದರು. ಈ ಸಂದರ್ಭದಲ್ಲಿ ಬಾಡಿಗೆ ಮನೆ ಹುಡುಕಲು ಹೊರಟಾಗ ಎದುರಿಸಿದ ಜಾತಿ ನಿಂದನೆಯನ್ನು ಈ ಕಥೆಯಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ.

ಡಾ. ಎಚ್. ಟಿ. ಪೋತೆಯವರ ಕಥಾ ಸಂಕಲನಗಳನ್ನು ಅವಲೋಕಿಸಿದಾಗ, ತಮ್ಮ ಜೀವನಾನುಭವಗಳನ್ನು ಶೋಷಿತ ಸಮುದಾಯದ ಸಾಮಾನ್ಯರ ಅನುಭವಗಳನ್ನಾಗಿ ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತವೆ. ಇಲ್ಲಿನ ಕಥೆಗಳು ಅಸ್ಪೃಶ್ಯರ, ಶೋಷಿತರ ನಿಷ್ಠುರ ಬದುಕಿನ ಜೀವನಾನುಭವ, ಜಾತಿ ತಾರತಮ್ಯ, ಜಮೀನ್ದಾರಿ ವ್ಯವಸ್ಥೆಯ ಚಿತ್ರಣವನ್ನು ಕಟ್ಟಿಕೊಡುವುದರ ಜೊತೆಗೆ ಶೋಷಿತ ಜನಾಂಗದ ಬಗ್ಗೆ ಎಚ್ಚರಿಕೆಯ ಸಂದೇಶವನ್ನು ಸಾರುತ್ತವೆ. ಶೋಷಣೆಗೊಳಗಾದ ತಂದೆಗೆ ತನ್ನ ಮಕ್ಕಳ ಬಗ್ಗೆ ಇರುವ ಪ್ರೀತಿ, ನಿಷ್ಠೆ ಮತ್ತು ತಾಯಿಯ ತ್ಯಾಗಮಯ ಜೀವನ ಕಥಾ ಸಂಕಲನಗಳಲ್ಲಿ ಮೂಡಿಬಂದಿವೆ. ಈ ಮೂಲಕ ಅವರ ಕಥಾಸಂಕಲನಗಳು ಸಾಮಾಜಿಕ ಸತ್ಯಾಂಶಗಳನ್ನು ಬಿಚ್ಚಿಡುತ್ತವೆ.

## ಪರಾಮರ್ಶನ ಗ್ರಂಥಗಳು:

1. ನಾಗಾಬಾಯಿ ಬುಳ್ಳಾ (ಸಂ.), (2014), ಶೋಧಸಿರಿ, ಕಲಬುರ್ಗಿ: ಕನ್ನಡ ಸಂಶೋಧನ ಸಂಘ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ.
2. ಪೋತೆ ಎಚ್. ಟಿ., (2013), ಚಮ್ಮಾವುಗೆ ಕಥಾ ಸಂಕಲನ, ಕಲಬುರ್ಗಿ: ಕುಟುಂಬ ಪ್ರಕಾಶನ.
3. ಪೋತೆ ಎಚ್. ಟಿ., (2016), ಕರುಳರಿಯುವ ಹೊತ್ತು ಕಥಾ ಸಂಕಲನ, ಬೆಂಗಳೂರು: ಸ್ವಪ್ನ ಬುಕ್ ಹೌಸ್.